## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರಡಿಯ ನಿಯಮಗಳನುಸಾರ ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣೆ/ಪರಿಷ್ಕರಣೆ ಹಾಗೂ ಕೇಂದ್ರ ಸ್ಥಾನ ಬದಲಾವಣೆ ಮಾಡುವ ಬಗ್ಗೆ. ಬರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸಮಿತಿ ರಚಿಸುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರಿ ಆದೇಶ ಸಂ. ಗ್ರಾಅಪ 81 ಗ್ರಾಪಸ 2011, ದಿನಾಂಕ 27.02.2012.
2) ಆರ್ಥಿಕ ಇಲಾಖೆಯವರ ಟಿಪ್ಪಣಿ ಕ್ರಮಾಂಕ ಆಇ:308ವೆ-06/2012, ದಿನಾಂಕ: 20.07.2012.

**ಪ್ರಸ್ತಾವನೆ:**

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 4 ರನ್ವಯ ಗ್ರಾಮ ಪಂಚಾಯತಿಗಳ ಪ್ರದೇಶದ ಘೋಷಣೆ, ಸ್ಥಾಪನೆ ಹಾಗೂ ಕೇಂದ್ರ ಸ್ಥಾನ ಬದಲಾವಣೆಗೆ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಸೂಕ್ತ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸರ್ಕಾರವು ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕರಣ 115 ರಡಿ ಚಿಕ್ಕ ನಗರ ಪ್ರದೇಶಗಳನ್ನು ಪಂಚಾಯತಿ ಪ್ರದೇಶವನ್ನಾಗಿ ಪರಿವರ್ತಿಸುವುದರ ಬಗ್ಗೆ, ಪ್ರಕರಣ 117 ರಲ್ಲಿ ಪಂಚಾಯತಿ ಪ್ರದೇಶಗಳ ಸಂಯೋಜನೆ ಮತ್ತು ಪ್ರಕರಣ 118 ರಲ್ಲಿ ಪಂಚಾಯತಿ ಪ್ರದೇಶದ ವಿಭಜನೆ ಬಗ್ಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ರಾಜ್ಯದಲ್ಲಿ 5629 ಗ್ರಾಮ ಪಂಚಾಯತಿಗಳಿದ್ದು, ಇತ್ತೀಚಿನ ದಿನಗಳಲ್ಲಿ ಅನೇಕ ಗ್ರಾಮ ಪಂಚಾಯತಿಗಳ ಜನಸಂಖ್ಯೆ ಸಾಂದ್ರತೆ ಹೆಚ್ಚಾಗಿದ್ದು, ಕೆಲವೊಂದು ಗ್ರಾಮ ಪಂಚಾಯ್ತಿಗಳನ್ನು ಆಡಳಿತಾತ್ಮಕ ಹಾಗೂ ಭೌತಿಕ ಕಾರಣಗಳಿಂದ ವಿಭಜಿಸಲು, ಗ್ರಾಮ ಪಂಚಾಯತಿಗಳ ಕೇಂದ್ರ ಸ್ಥಾನವನ್ನು ಬದಲಾಯಿಸಲು ಹಾಗೂ ಕೆಲವೊಂದು ಗ್ರಾಮಗಳನ್ನು ಗ್ರಾಮ ಪಂಚಾಯತಿಯಿಂದ ಪ್ರತ್ಯೇಕಿಸಿ ಮತ್ತೊಂದು ಗ್ರಾಮ ಪಂಚಾಯತಿಗೆ ಸೇರಿಸುವ ಅಥವಾ ಹೊಸ ಗ್ರಾಮ ಪಂಚಾಯತಿ ರಚಿಸುವ ಬಗ್ಗೆ ಹಲವಾರು ಪ್ರಸ್ತಾವನೆಗಳು ಸಚಿವರುಗಳಿಂದ, ಶಾಸಕರುಗಳಿಂದ ಹಾಗೂ ಹಲವಾರು ಜನಪ್ರತಿನಿಧಿಗಳಿಂದ ಸರ್ಕಾರಕ್ಕೆ ನೇರವಾಗಿ ಸಲ್ಲಿಸಲಾಗುತ್ತಿದೆ. ಇಂತಹ ಪ್ರಸ್ತಾವನೆಗಳನ್ನು ಉಲ್ಲೇಖಿತ ನಿಯಮಾನುಸಾರ ಪರಿಶೀಲಿಸಿ ಜಿಲ್ಲಾಧಿಕಾರಿಗಳ ವರದಿಯ ಮೇಲೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದರೆ, ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣೆ ಮತ್ತು ವಿಭಜನೆಗೆ ಸರ್ಕಾರದ ಮೇಲೆ ಒತ್ತಡ ಬರುತ್ತಿರುವ ಹಿನ್ನೆಲೆಯಲ್ಲಿ ಸದರಿ ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಉಲ್ಲೇಖಿತ ಸರ್ಕಾರಿ ಆದೇಶ (1)ರಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಆದರೆ, ಈ ಸಮಿತಿಯು ಕಾರ್ಯಾರಂಭ ಮಾಡದಿರುವುದರಿಂದ ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ರಚಿತವಾಗಿರುವ ಸಮಿತಿಯನ್ನು ರದ್ದುಪಡಿಸಲಾಗಿದೆ.

ಸರ್ಕಾರದಲ್ಲಿ ಸ್ವೀಕೃತವಾಗಿರುವ ಮೇಲ್ಕಂಡ ಪ್ರಸ್ತಾವನೆಗಳನ್ನು ಪರಿಶೀಲಿಸಲು ಹಾಗೂ ಎಲ್ಲಾ ಜಿಲ್ಲೆಗಳಿಗೂ ಭೇಟಿ ನೀಡಿ ಸಾರ್ವಜನಿಕರ ಹಾಗೂ ಜನಪ್ರತಿನಿಧಿಗಳ ಮನವಿಗಳನ್ನು ಸ್ವೀಕರಿಸಲು ಹಾಗೂ

ಪರಿಶೀಲಿಸಿ ಸರ್ಕಾರಕ್ಕೆ ಸ್ಪಷ್ಟ ಶಿಫಾರಸ್ಸು ಮಾಡಲು ಸಮಿತಿಯೊಂದನ್ನು ರಚಿಸುವ ಅವಶ್ಯಕತೆಯನ್ನು ಸರ್ಕಾರವು ಮನಗಂಡಿದೆ. ಆದುದರಿಂದ, ಮಾಜಿ ಶಾಸಕರಾದ ಶ್ರೀ ಎಸ್.ಜಿ.ನಂಜಯ್ಯನಮಠ ರವರ ಅಧ್ಯಕ್ಷತೆಯಲ್ಲಿ ಮತ್ತು ಇನ್ನಿತರೆ 6 ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸುವ ಬಗ್ಗೆ ಸರ್ಕಾರ ನಿರ್ಧರಿಸಿದೆ. ಸಮಿತಿಯ ಕಾರ್ಯಚಟುವಟಿಕೆಗಳಿಗೆ ಬೇಕಾಗುವ ವಾಹವನವನ್ನು ಬಾಹ್ಯ ಮೂಲಗಳಿಂದ (outsourcing basis) ಪಡೆಯಬಹುದೆಂದು ಈಗಾಗಲೇ ಆರ್ಥಿಕ ಇಲಾಖೆಯವರು ಮೇಲೆ ಓದಲಾಗಿರುವ 2ರಲ್ಲಿ ಸಹಮತಿಯನ್ನು ನೀಡಿರುತ್ತಾರೆ. ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಯಿತು. ಅದರಂತೆ ಈ ಕೆಳಕಂಡಂತೆ ಆದೇಶ.

**ಸರ್ಕಾರಿ ಆದೇಶ ಸಂ. ಗ್ರಾಅಪ 38 ಗ್ರಾಪಸ 2013, ಬೆಂಗಳೂರು, ದಿನಾಂಕ 01.03.2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಅಧ್ಯಕ್ಷರು ಮತ್ತು ಸದಸ್ಯರನ್ನೊಳಗೊಂಡಂತೆ ಗ್ರಾಮ ಪಂಚಾಯತಿಗಳ ವ್ಯಾಪ್ತಿಯನ್ನು ಪುನರ್ ವಿಂಗಡಿಸುವ ಕುರಿತು ಸಮಿತಿಯನ್ನು ರಚಿಸಲಾಗಿದೆ.

**ಗ್ರಾಮ ಪಂಚಾಯತಿ ಪುನರ್ ವಿಂಗಡಣಾ ಸಮಿತಿ**

| | | |
|---|---|---|
| 1. | ಶ್ರೀ ಎಸ್.ಜಿ.ನಂಜಯ್ಯನಮಠ, ಮಾಜಿ ಶಾಸಕರು | ಅಧ್ಯಕ್ಷರು |
| 2. | ಶ್ರೀ ಎಸ್.ಬಿ.ದ್ಯಾಬೇರಿ, ನಿವೃತ್ತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | ಸದಸ್ಯರು |
| 3. | ಶ್ರೀ ಬಿ.ಸಿ.ಶಿವಾನಂದ, ರಾಜೀವ್ ಗಾಂಧಿ ಸಂಘಟನೆ, ಮಂಡ್ಯ | ಸದಸ್ಯರು |
| 4. | ಶ್ರೀ ಎಸ್.ಕೆ.ಭಾಗವತ್, ಶಿರಸಿ, ಉತ್ತರ ಕನ್ನಡ ಜಿಲ್ಲೆ | ಸದಸ್ಯರು |
| 5. | ಶ್ರೀಮತಿ ಎ.ಆರ್.ಸುಧಾಮಣಿ, ಹುಣಸೂರು | ಸದಸ್ಯರು |
| 6. | ಶ್ರೀ ರಾವ್ ಸಾಹೇಬ ಅಲಗುಂದ, ರಾಜೀವ್ ಗಾಂಧಿ ಸಂಘಟನೆ, ಬೆಳಗಾವಿ | ಸದಸ್ಯರು |
| 7. | ಶ್ರೀ ಪಿ.ಶಿವಶಂಕರ್, ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು | ಸದಸ್ಯ ಕಾರ್ಯದರ್ಶಿ |

ಸಮಿತಿಯ ಕಾರ್ಯಚಟುವಟಿಕೆಯ ನೋಡಲ್ ಸಂಸ್ಥೆಯಾಗಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ರವರನ್ನು ನೇಮಿಸಲಾಗಿದೆ. ಈ ಸಮಿತಿಗೆ ತಗಲುವ ವೆಚ್ಚವನ್ನು 2013-14ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ ಅನುದಾನದಡಿ ಭರಿಸತಕ್ಕದ್ದು.

**ಸಮಿತಿಯ ಅವಧಿ ಮತ್ತು ಪರಿಶೀಲನಾಂಶಗಳು ಕೆಳಕಂಡಂತಿವೆ:**

1. ಸಮಿತಿಯು ಆಗಸ್ಟ್ 2014ರ ಅಂತ್ಯದೊಳಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು.
2. ಗ್ರಾಮ ಪಂಚಾಯತಿಗಳ ಪುನರ್‌ರಚನೆ ಬಗ್ಗೆ ಸರ್ಕಾಅದಲ್ಲಿ ಸ್ವೀಕೃತವಾಗಿರುವ ಹಾಗೂ ಮುಂದೆ ಸ್ವೀಕೃತಗೊಳ್ಳಲಿರುವ ಮನವಿಗಳನ್ನು ಪರಿಶೀಲಿಸಿ ಹಾಗೂ ಸ್ಥಳ ಪರೀಕ್ಷಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.

3. ಗ್ರಾಮ ಪಂಚಾಯತಿಗಳ ಜನಸಂಖ್ಯೆಗನುಗುಣವಾಗಿ ಪ್ರತ್ಯೇಕ ಗ್ರಾಮ ಪಂಚಾಯತಿಯನ್ನು ರಚಿಸುವ ಅಥವಾ ವಿಭಜಿಸುವ ಅಥವಾ ಸಂಯೋಜಿಸುವ ಬಗ್ಗೆ ಪರಿಶೀಲನೆ ನಡೆಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವುದು.
4. ಗ್ರಾಮ ಪಂಚಾಯತಿಗಳ ಕೇಂದ್ರ ಸ್ಥಾನವನ್ನು ಬದಲಾಯಿಸುವ ಅಥವಾ ಸ್ಥಳಾಂತರಿಸುವ ಪ್ರಸ್ತಾವನೆಗಳ ಬಗ್ಗೆ ಪರಿಶೀಲನೆ ಮಾಡುವುದು.
5. ಗ್ರಾಮ ಪಂಚಾಯತಿಗಳ ಸದಸ್ಯರ ಸಂಖ್ಯೆ ಹೆಚ್ಚಳ ಕುರಿತು ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು.
6. ಸಮಿತಿಯ ಇನ್ನಿತರ ಕಾರ್ಯಚಟುವಟಿಕೆಗೆ, ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಕಾರ್ಯ ಕ್ಷೇತ್ರವನ್ನು ಗುರುತು ಮಾಡುವ ಕಾರ್ಯವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ರವರಿಗೆ ವಹಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

1/03/14

(ಎಲ್.ಸಿ.ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾ.ಅ&ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಶ್ರೀ ಎಸ್.ಜಿ.ನಂಜಯ್ಯನಮಠ, ಮಾಜಿ ಶಾಸಕರು, ಬಾಗಲಕೋಟೆ ಜಿಲ್ಲೆ.
3. ಶ್ರೀ ಎಸ್.ಬಿ.ದ್ಯಾಬೇರಿ, ನಿವೃತ್ತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
4. ಶ್ರೀ ಬಿ.ಸಿ.ಶಿವಾನಂದ, ರಾಜೀವ್ ಗಾಂಧಿ ಸಂಘಟನೆ, ಮಂಡ್ಯ.
5. ಶ್ರೀ ಎಸ್.ಕೆ.ಭಾಗವತ್, ಶಿರಸಿ, ಉತ್ತರ ಕನ್ನಡ ಜಿಲ್ಲೆ.
6. ಶ್ರೀಮತಿ ಎ.ಆರ್.ಸುಧಾಮಣಿ, ಹುಣಸೂರು.
7. ಶ್ರೀ ರಾವ್ ಸಾಹೇಬ ಅಲಗುಂದ, ರಾಜೀವ್ ಗಾಂಧಿ ಸಂಘಟನೆ, ಬೆಳಗಾವಿ
8. ಮಹಾನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು.
9. ಪ್ರಾದೇಶಿಕ ಆಯುಕ್ತರು, ಬೆಳಗಾವಿ, ಬೆಂಗಳೂರು, ಗುಲ್ಬರ್ಗಾ ಮತ್ತು ಮೈಸೂರು ವಿಭಾಗ.
10. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
11. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
12. ಶ್ರೀ ಪಿ.ಶಿವಶಂಕರ್, ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು.
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ:

1. ಮಾನ್ಯ ಗ್ರಾ.ಅ&ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಅಪರ - ಮುಖ್ಯ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು.
3. ಕರ್ನಾಟಕ ವಿಕಾಸ/ವೆಬ್ ಸೈಟ್

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ: 38: ಗ್ರಾಪಸ: 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 11.07.2014.

## "ಸೇರ್ಪಡೆ ಆದೇಶ"

ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ 38 ಗ್ರಾಪಸ 2013, ದಿನಾಂಕ; 01.03.2013ರಲ್ಲಿ "ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣೆ/ಪರಿಷ್ಕರಣೆ ಹಾಗೂ ಕೇಂದ್ರ ಸ್ಥಾನ ಬದಲಾವಣೆ ಮಾಡುವ ಸಂಬಂಧ ಸರ್ಕಾರಕ್ಕೆ ಶಿಫಾರಸ್ಸಿನ ವರದಿಯನ್ನು ಸಲ್ಲಿಸಲು ಮಾಜಿ ಶಾಸಕರಾದ ಶ್ರೀ ಎಸ್.ಜಿ. ನಂಜಯ್ಯನಮಠ್, ಇವರ ಅಧ್ಯಕ್ಷತೆಯಲ್ಲಿ ಮತ್ತು ಇನ್ನಿತರೆ 6 ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಆದೇಶದ ಭಾಗದಲ್ಲಿ ಗ್ರಾಮ ಪಂಚಾಯತಿ ಪುನರ್ ವಿಂಗಡಣಾ ಸಮಿತಿಯಲ್ಲಿ ಹೆಸರಿಸಿರುವ ಸದಸ್ಯರುಗಳ ಜೊತೆಗೆ, ಈ ಕೆಳಕಂಡ ಸದಸ್ಯರುಗಳನ್ನು ಸಹ ಸೇರಿಸಿ ಓದಿಕೊಳ್ಳತಕ್ಕದ್ದು.

| | | |
|---|---|---|
| 1. | ಶ್ರೀ ಕಲ್ಲುಕಂಬ ಪಂಪಾಪತಿ, ಎಂ.ಕೆ ನಗರ, ಬಳ್ಳಾರಿ ಜಿಲ್ಲೆ. | ಸದಸ್ಯರು |
| 2. | ಶ್ರೀ ವೆಂಕಣ್ಣ ಯರಾಸಿ, ಬನ್ನಿಕೊಪ್ಪ ಅಂಚೆ, ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ. | ಸದಸ್ಯರು |

ಈ ಮೇಲ್ಕಂಡ ಸದಸ್ಯರುಗಳಿಗೆ ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ:38:ಗ್ರಾಪಸ:2014, ದಿನಾಂಕ: 21.06.2014ರನ್ವಯ ಉಪವೇಶನ ಹಾಗೂ ಇತರೆ ಭತ್ಯಗಳನ್ನು ಪಾವತಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

11/07/14
(ಎಲ್.ಸಿ. ಬಸವರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ,**

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಪ್ರಾದೇಶಿಕ ಆಯುಕ್ತರು, ಬೆಳಗಾವಿ, ಬೆಂಗಳೂರು, ಗುಲ್ಬರ್ಗಾ ಮತ್ತು ಮೈಸೂರು ವಿಭಾಗ
3) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
4) ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು,
5) ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತ ಮಹಲ್ ರಸ್ತೆ ಮೈಸೂರು.
6) ಶ್ರೀ ಎಸ್.ಜಿ ನಂಜಯ್ಯನಮಠ ಮಾಜಿ ಶಾಸಕರು, ಬಾಗಲಕೋಟೆ ಜಿಲ್ಲೆ
7) ಶ್ರೀ ಎಸ್.ಬಿ. ದ್ಯಾಬೇರಿ, ನಿವೃತ್ತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ.
8) ಶ್ರೀ ಬಿಸ್.ಬಿ.ಶಿವಾನಂದ, ರಾಜೀವ್ ಗಾಂಧಿ ಸಂಘಟನೆ, ಮಂಡ್ಯ.

9) ಶ್ರೀ ಎಸ್.ಕೆ.ಭಾಗವತ್, ಶಿರಸಿ, ಉತ್ತರ ಕನ್ನಡ ಜಿಲ್ಲೆ.

10) ಶ್ರೀಮತಿ ಎ.ಆರ್.ಸುಧಾಮಣಿ, ಹುಣಸೂರು.

11) ಶ್ರೀ ರಾವ್ ಸಾಹೇಬ ಅಲಗುಂದ, ರಾಜೀವ್ ಗಾಂಧಿ ಸಂಘಟನೆ, ಬೆಳಗಾವಿ.

12) ಶ್ರೀ ಕಲ್ಲುಕಂಬ ಪಂಪಾಪತಿ, ಎಂ.ಕೆ ನಗರ, ಬಳ್ಳಾರಿ ಜಿಲ್ಲೆ.

13) ಶ್ರೀ ವೆಂಕಣ್ಣ ಯರಾಸಿ, ಬನ್ನಿಕೊಪ್ಪ ಅಂಚೆ, ಯಲಬುರ್ಗಾ ತಾಲ್ಲೂಕು, ಕೊಪ್ಪಳ ಜಿಲ್ಲೆ.

14) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

<u>ಪ್ರತಿ ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
3) ಸರ್ಕಾರದ ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕರು.

E:\M.Ar\GO\38